ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 4/7/2020

### ಆಗಸ್ಟ್ ಕೊನೆಯ ವಾರ ಅಥವಾ ಸೆಪ್ಟೆಂಬರ್ ಮೊದಲ ವಾರದಲ್ಲಿ ಅಧಿವೇಶನ ಸಾಧ್ಯತೆ

# ಸಂಸತ್ ಮುಂಗಾರು ಅಧಿವೇಶನ ಸಿದ್ಧತೆ

ಸಂ.ಕ 4/7/20

- ಆಗಸ್ಟ್ ಕೊನೆ ಅಥವಾ ಸೆಪ್ಟಂಬರ್ ಆದಿಯಲ್ಲಿ ಆರಂಭ
- ಸದಸ್ಯರ ದೈಹಿಕ ಹಾಜರಿಯಲ್ಲಿ ಕಲಾಪ ಸಾಧ್ಯತೆ ಹೆಚ್ಚು
- ದೀರ್ಘಕಾಲದಲ್ಲಿ ವರ್ಚುವಲ್ ಅಧಿವೇಶನದ ಪ್ರಸ್ತಾಪ

ನವದೆಹಲಿ: ಆಗಸ್ಟ್ ಕೊನೆಯ ವಾರ ಅಥವಾ ಸೆಪ್ಟಂಬರ್ ಮೊದಲ ವಾರದಲ್ಲಿ ಸಂಸದರ ದೈಹಿಕ ಹಾಜರಿಯಲ್ಲಿ ಸಂಸತ್ತಿನ ಮುಂಗಾರು ಅಧಿವೇಶನ ನಡೆಸಬಹುದಾದ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಆದರೆ ಕೊರೊನಾ ಸೋಂಕಿನ ಪ್ರಮಾಣ ಹೆಚ್ಚುತ್ತಲೇ ಇರುವುದರಿಂದ ಇನ್ನೂ ಯಾವುದೇ ಅಂತಿಮ ನಿರ್ಧಾರ ಕೈಗೊಂಡಿಲ್ಲ. ಸಾಮಾಜಿಕ ಅಂತರ ನಿಯಮಗಳನ್ನು ಪಾಲಿಸಿಕೊಂಡು ಅಧಿವೇಶನವನ್ನು ಹೇಗೆ ನಡೆಸಬಹುದೆಂಬುದರ ಬಗ್ಗೆ ಸ್ಪಷ್ಟ ಚಿತ್ರಣ ದೊರೆತಿಲ್ಲ ಎಂದು ಮೂಲಗಳು ತಿಳಿಸಿವೆ. ಲೋಕಸಭೆ ಕಲಾಪವನ್ನು ಸೆಂಟ್ರಲ್ ಹಾಲ್‌ನಲ್ಲಿ ಹಾಗೂ ರಾಜ್ಯಸಭೆ ಕಲಾಪವನ್ನು ಲೋಕಸಭೆ ಅಂಗಳದಲ್ಲಿ ನಡೆಸುವ ಚಿಂತನೆ ನಡೆದಿದೆ. ಉಭಯ ಸದನಗಳ ಅಧ್ಯಕ್ಷರಾದ ಸ್ಪೀಕರ್ ಓಂ ಬಿರ್ಲಾ ಮತ್ತು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಈ ಕುರಿತು ಸಮಾಲೋಚನೆ ನಡೆಸುತ್ತಿದ್ದಾರೆ. ದೀರ್ಘಕಾಲದಲ್ಲಿ ವರ್ಚುವಲ್ ಅಧಿವೇಶನ ವಿಧಾನ ಅನುಸರಿಸುವ ಆಯ್ಕೆಯನ್ನು ಅವರು ಮುಂದಿಟ್ಟಿದ್ದಾರೆ. ಪೂರ್ಣಾವಧಿ ಅಧಿವೇಶನ ನಡೆಸುವ ಉದ್ದೇಶ ಸರ್ಕಾರಕ್ಕೆ ಇದ್ದಾಗ್ಯೂ ಕಲಾಪದ ಕಾಲಮಿತಿ ಯನ್ನು ಅಂದಿನ ಪರಿಸ್ಥಿತಿಯನ್ನು ಆಧರಿಸಿ ನಿರ್ಣಯಿಸಲಾ ಗುತ್ತದೆ. ಅನೇಕ ಪ್ರಮುಖ ಸುಗ್ರೀವಾಜ್ಞೆಗಳನ್ನು ಮಂಡಿ ಸಬೇಕಿರುವ ಹಿನ್ನೆಲೆಯಲ್ಲಿ ಅಧಿವೇಶನ ಸಾಮಾನ್ಯ ಅವಧಿಯದ್ದಾಗಿ ರುತ್ತದೆ ಎಂದು ನಿರೀಕ್ಷಿಸಲಾಗಿದೆ.

ಸಂಸತ್ತಿನ ಎರಡು ಅಧಿವೇಶನಗಳ ನಡುವಿನ ಅಂತರ 6 ತಿಂಗಳನ್ನು ಮೀರಲು ಅವಕಾಶವಿಲ್ಲವಾದ್ದರಿಂದ ಮುಂಗಾರು ಅಧಿವೇಶನ ಸೆಪ್ಟಂಬರ್ 22ರೊಳಗೆ ಆರಂಭವಾಗುವುದು ಖಚಿತ ವಾಗಿದೆ. ಏಪ್ರಿಲ್ 3ಕ್ಕೆ ಅಂತ್ಯಗೊಳ್ಳಬೇಕಿದ್ದ ಬಜೆಟ್ ಅಧಿವೇಶನ ಮಾರ್ಚ್ 23ರಂದೇ ಮುಂಗಡವಾಗಿ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿತ್ತು.